I/603303/2024

**ಕರ್ನಾಟಕ ಸರ್ಕಾರ**

**ತಾಂತ್ರಿಕ ಶಿಕ್ಷಣ ಇಲಾಖೆ**

DTE-ADMI0ACM2/23 /2024

ಆಯುಕ್ತರ ಕಛೇರಿ,
ತಾಂತ್ರಿಕ ಶಿಕ್ಷಣ ಭವನ,
ಅರಮನೆ ರಸ್ತೆ, ಬೆಂಗಳೂರು-560 001.
ದಿನಾಂಕ:07-05-2024.

## -::: ಪ್ರವೇಶಾಧಿಸೂಚನೆ :::-

| | |
|---|---|
| **ವಿಷಯ:** | ರಾಜ್ಯದ ಖಾಸಗಿ ಪಾಲಿಟೆಕ್ನಿಕ್ ಹಾಗೂ ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿನ ಅನುದಾನ ರಹಿತ ಕೋರ್ಸುಗಳಿಗೆ **2024-25**ನೇ ಸಾಲಿನಲ್ಲಿ ಪ್ರಥಮ ಸೆಮಿಸ್ಟರ್ ಡಿಪ್ಲೋಮಾ ಪ್ರವೇಶಕ್ಕಾಗಿ ಸೀಟು ಹಂಚಿಕೆ ಮಾಡುವ ಬಗ್ಗೆ. |
| **ಉಲ್ಲೇಖ:** | 1. ಸರ್ಕಾರದ ಆದೇಶ ಸಂ: ಇಡಿ 114 ಟಿಪಿಇ 87, ದಿ: 20/07/1987.<br>2. ಸರ್ಕಾರದ ಅಧಿಸೂಚನೆ ಸಂ: ಎಸ್‌ಡಬ್ಲ್ಯೂಡಿ 225 ಬಿಸಿಎ 2000, ದಿನಾಂಕ: 30/03/2002 (ಮೀಸಲಾತಿಗೆ ಸಂಬಂಧಿಸಿದಂತೆ)<br>3. ಸರ್ಕಾರದ ಆದೇಶ ಸಂ: ಇಡಿ 106 ಟಿಪಿಇ 2005, ದಿ:06/05/2005, ಇಡಿ/99/ಟಿಪಿಇ/2011, ದಿ:29-04-2011 ಮತ್ತು 2012-13ನೇ ಸಾಲಿನ ಎ.ಐ.ಸಿ.ಟಿ.ಇ ಯ ಪ್ರವೇಶ ಸಂಬಂಧ ಮಾರ್ಗಸೂಚಿ. (ಕನಿಷ್ಠ ವಿದ್ಯಾರ್ಹತೆ ಬಗ್ಗೆ)<br>4. ಸರ್ಕಾರದ ಆದೇಶ ಸಂ: ಇಡಿ 119 ಟಿಪಿಇ 2005, ದಿನಾಂಕ: 18/10/2005 ಮತ್ತು ಇಡಿ 10 ಟಿಪಿಇ 2012, ದಿ:20-05-2012 & 29-07-2022. (ಶುಲ್ಕ ಪರಿಷ್ಕರಣೆಗೆ ಸಂಬಂಧಿಸಿದಂತೆ) |

**********

ಉಲ್ಲೇಖ(1) ರಿಂದ (4)ರಲ್ಲಿ ನಮೂದಿಸಿರುವ ಸರ್ಕಾರದ ಆದೇಶಗಳಲ್ಲಿ ರಾಜ್ಯದಲ್ಲಿನ ಖಾಸಗಿ ಪಾಲಿಟೆಕ್ನಿಕ್‌ಗಳ ಹಾಗೂ ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿನ ಅನುದಾನರಹಿತ ಕೋರ್ಸುಗಳಿಗೆ ಪ್ರಥಮ ಡಿಪ್ಲೋಮಾ ಪ್ರವೇಶಕ್ಕೆ ಸಂಬಂಧಿಸಿದಂತೆ ನಿಯಮಗಳನ್ನು ರೂಪಿಸಲಾಗಿದ್ದು, ಈ ನಿಯಮಗಳನ್ವಯ 2024-25ನೇ ಸಾಲಿನಲ್ಲಿ ಪ್ರಥಮ ಸೆಮಿಸ್ಟರ್ ಡಿಪ್ಲೋಮಾ ಕೋರ್ಸುಗಳ ಪ್ರವೇಶಕ್ಕೆ ಕೆಳಕಂಡ ಮಾರ್ಗಸೂಚಿಯನ್ನು ಹೊರಡಿಸಲಾಗಿದೆ.

**2024-25**ನೇ ಸಾಲಿನಲ್ಲಿ ಪ್ರಥಮ ಡಿಪ್ಲೋಮಾ ಕೋರ್ಸ್‌ಗಳಿಗೆ ಪ್ರವೇಶ ನೀಡುವಾಗ ಸಂಬಂಧಿಸಿದ ಪಾಲಿಟೆಕ್ನಿಕ್‌ನ ಪ್ರಿನ್ಸಿಪಾಲರು ಈ ನಿಯಮಗಳು ಮತ್ತು ಮಾರ್ಗಸೂಚಿಯಲ್ಲಿನ ಅಂಶಗಳನ್ನು ಕ್ರಮವಾಗಿ ಅನುಸರಿಸಿ ಅರ್ಹ ಅಭ್ಯರ್ಥಿಗಳಿಗೆ ಪ್ರಥಮ ಡಿಪ್ಲೋಮಾ ಕೋರ್ಸ್‌ಗಳಿಗೆ **ದಿನಾಂಕ:30-05-2024ರ** ಒಳಗೆ ಪ್ರವೇಶ ನೀಡುವ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಲಾಗಿದೆ. ಅಂತಿಮ ದಿನಾಂಕದ ನಂತರ ಮತ್ತು ನಿಯಮಗಳನ್ನು ಮೀರಿ ಮಾಡಿಕೊಂಡಂತಹ ಪ್ರವೇಶಗಳನ್ನು ಅನುಮೋದಿಸಲಾಗುವುದಿಲ್ಲ ಹಾಗೂ ಮುಂದೆ ಉದ್ಭವಿಸಬಹುದಾದ ಪರಿಣಾಮಗಳಿಗೆ ಪ್ರಿನ್ಸಿಪಾಲರೇ ನೇರ ಜವಾಬ್ದಾರರಾಗುತ್ತಾರೆ.

**1.ಪ್ರಥಮ ಡಿಪ್ಲೋಮಾ ಪ್ರವೇಶಕ್ಕೆ ನಿಗಧಿಪಡಿಸಲಾಗಿರುವ ಕನಿಷ್ಠ ವಿದ್ಯಾರ್ಹತೆ:**

| **ಮೀಸಲಾತಿ** | **ಇಂಜಿನಿಯರಿಂಗ್ / ನಾನ್ ಇಂಜಿನಿಯರಿಂಗ್ ಕೋರ್ಸುಗಳಿಗೆ** |
|---|---|
| ಎಲ್ಲಾ ವರ್ಗದ ಅಭ್ಯರ್ಥಿಗಳಿಗೆ ಅನ್ವಯ ವಾಗುವಂತೆ | ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಒಟ್ಟಾರೆ ಶೇ.35 ಅಂಕಗಳನ್ನು ಪಡೆದಿರಬೇಕು. |

**2. ಕರ್ನಾಟಕ ಅಭ್ಯರ್ಥಿಯೆಂದು ಪರಿಗಣಿಸಲು:-**

1. ಅಭ್ಯರ್ಥಿಯು ಸರ್ಕಾರದಿಂದ ಮಾನ್ಯತೆ ಪಡೆದ ಕರ್ನಾಟಕದಲ್ಲಿನ ಯಾವುದೇ ಶಿಕ್ಷಣ ಸಂಸ್ಥೆಯಲ್ಲಿ ಒಂದನೇ ತರಗತಿಯಿಂದ ಹತ್ತನೇ ತರಗತಿಯನ್ನೊಳಗೊಂಡು ಕನಿಷ್ಠ 5 ವರ್ಷಗಳ ಕಾಲ ವ್ಯಾಸಂಗ ಮಾಡಿರಬೇಕು. (ಈ ಬಗ್ಗೆ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿ ಅಥವಾ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರಿಂದ ದೃಢೀಕರಿಸಲ್ಪಟ್ಟ ವ್ಯಾಸಂಗ ಪ್ರಮಾಣ ಪತ್ರ ಪಡೆದು ಪ್ರವೇಶ ಸಮಯದಲ್ಲಿ ಹಾಜರುಪಡಿಸಬೇಕು.)
2. ಅಭ್ಯರ್ಥಿಯು ಮೀಸಲಾತಿಯ ಸೌಲಭ್ಯ ಪಡೆಯಲು, ಅಭ್ಯರ್ಥಿ ಹಾಗೂ ಅಭ್ಯರ್ಥಿಯ ಪಾಲಕರು ಕರ್ನಾಟಕದ ಶಾಶ್ವತ ನಿವಾಸಿಯಾಗಿರಬೇಕು.
3. ಹೊರ ರಾಜ್ಯದಿಂದ ಕರ್ನಾಟಕ ರಾಜ್ಯಕ್ಕೆ ವಲಸೆ ಬಂದಿರುವ ಅಭ್ಯರ್ಥಿಗಳು/ಪಾಲಕರು ಮೀಸಲಾತಿಯನ್ನು ಕರ್ನಾಟಕದಲ್ಲಿ ಪಡೆಯಲು ಅರ್ಹರಾಗಿರುವುದಿಲ್ಲ.
4. ಶಾಶ್ವತ ನಿವಾಸಿ ಎಂದು ಧೃಢಪಡಿಸಲು ಅಭ್ಯರ್ಥಿಯು ಆಯಾ ಪ್ರದೇಶದ ತಹಶೀಲ್ದಾರ್‌ರವರ ಕಛೇರಿಯಿಂದ ಡೊಮಿಸಲ್ ಸರ್ಟಿಫಿಕೇಟನ್ನು ಪಡೆದು ಸಲ್ಲಿಸಬೇಕು. ಡೊಮಿಸಲ್ ಪ್ರಮಾಣ ಪತ್ರದಲ್ಲಿ ಅಭ್ಯರ್ಥಿಯ ಪೂರ್ಣ ವಿಳಾಸ (ಮನೆ ನಂಬರ್ ಸಹಿತ) ವನ್ನು ಹೊಂದಿರತಕ್ಕದ್ದು.

**3. ಪ್ರವೇಶ ಸಂಖ್ಯೆಯ ಮಿತಿಯೊಳಗೆ (ಇನ್‌ಟೇಕ್) ಹಾಗೂ ಮಾನ್ಯತೆ ಪಡೆದ ಕೋರ್ಸಿಗೆ ಪ್ರವೇಶ ನೀಡುವ ಬಗ್ಗೆ:-**

**2024-25**ನೇ ಸಾಲಿನ ಪ್ರವೇಶವು ಎ.ಐ.ಸಿ.ಟಿ.ಇ ಮತ್ತು ಸರ್ಕಾರ ನಿಗಧಿಪಡಿಸಲಾಗಿರುವ ಕೋರ್ಸು ಮತ್ತು ಪ್ರವೇಶ ಸಂಖ್ಯೆಯ ಮಿತಿಯೊಳಗೆ ಇರತಕ್ಕದ್ದು. ಆದಾಗ್ಯೂ ಪಾಲಿಟೆಕ್ನಿಕ್‌ನ ಇಂಟೇಕ್ ನಿಗದಿಯಲ್ಲಿ ಬದಲಾವಣೆ ಅಥವಾ ಮಾರ್ಪಾಡು ಆದ ಪಕ್ಷದಲ್ಲಿ ಪ್ರವೇಶ ಸಂಖ್ಯೆಯನ್ನು ಸರಿದೂಗಿಸುವ ಷರತ್ತಿಗೆ ಒಳಪಟ್ಟಿರುತ್ತದೆ. ಸರ್ಕಾರದ ಆದೇಶ ಮತ್ತು ಎ.ಐ.ಸಿ.ಟಿ.ಇ.ಯ ಪೂರ್ವಾನುಮತಿ ಇಲ್ಲದ ಹೊಸ ಕೋರ್ಸುಗಳಿಗೆ ಪ್ರವೇಶ ಮತ್ತು ಪ್ರವೇಶ ಮರುಹೊಂದಾಣಿಕೆಗೂ ಅವಕಾಶವಿರುವುದಿಲ್ಲ. ಅಲ್ಲದೆ ನಿಯಮಗಳನ್ನು ಮೀರಿ ಪ್ರವೇಶ ಮಾಡಿಕೊಳ್ಳಲಾದ ಅಭ್ಯರ್ಥಿಗಳ ಪ್ರವೇಶಾನುಮೋದನೆಯನ್ನು ರದ್ದುಪಡಿಸಲಾಗುವುದು. ಇದಕ್ಕೆ ಆಯಾ ಸಂಸ್ಥೆಯ ಪ್ರಿನ್ಸಿಪಾಲರು ಮತ್ತು ಆಡಳಿತ ಮಂಡಳಿಯವರೇ ಸಂಪೂರ್ಣ ಜವಾಬ್ದಾರರಾಗುತ್ತಾರೆ.

**4. ಡಿಪ್ಲೋಮಾ ಪ್ರವೇಶಕ್ಕೆ ಸಂಬಂಧಿಸಿದ ಎಲ್ಲಾ ಅಗತ್ಯ ಮೂಲ ದಾಖಲೆಗಳು**

1. ಎಸ್.ಎಸ್.ಎಲ್.ಸಿ/ಪಿ.ಯು.ಸಿ ಅಥವಾ ತತ್ಸಮಾನ ಪರೀಕ್ಷೆಯ ಅಂಕಪಟ್ಟಿ.
2. ಮೂಲ ವರ್ಗಾವಣೆ ಪ್ರಮಾಣ ಪತ್ರ.
   (ಪಿ.ಯು.ಸಿ ಅಥವಾ ಇತರೆ ಕೋರ್ಸಿಗೆ ಪ್ರವೇಶ ಪಡೆದಿದ್ದಲ್ಲಿ ಅಥವಾ ಪಿ.ಯು.ಸಿ.ಯಲ್ಲಿ / ಇತರೆ ಕೋರ್ಸಿನಲ್ಲಿ ಅನುತ್ತೀರ್ಣರಾಗಿರುವ ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ ವರ್ಗಾವಣೆ ಪ್ರಮಾಣ ಪತ್ರದ ಹಿಂಬರಹವನ್ನು ಸಲ್ಲಿಸಬೇಕು. ಸೀಟು ಆಯ್ಕೆ ಮಾಡಿಕೊಂಡ ನಂತರ ಸಂಬಂಧಪಟ್ಟ ಸಂಸ್ಥೆಯಲ್ಲಿ ಪ್ರವೇಶವನ್ನು ಪಡೆದುಕೊಳ್ಳುವ ಸಂದರ್ಭದಲ್ಲಿ ಕಡ್ಡಾಯವಾಗಿ ಮೂಲ ವರ್ಗಾವಣೆ ಪತ್ರವನ್ನು ಸಲ್ಲಿಸತಕ್ಕದ್ದು. ಇಲ್ಲದಿದ್ದಲ್ಲಿ, ಅಂತಹ ಅಭ್ಯರ್ಥಿಯ ಪ್ರವೇಶವನ್ನು ಪ್ರವೇಶಾನುಮೋದನೆಯ ಸಮಯದಲ್ಲಿ ರದ್ದು ಪಡಿಸಲಾಗುವುದು).
3. 01ನೇ ತರಗತಿಯಿಂದ 10ನೇ ತರಗತಿಯನ್ನೊಳಗೊಂಡ ಕನಿಷ್ಠ 05 ವರ್ಷ ವ್ಯಾಸಂಗ ಮಾಡಿದ ಬಗ್ಗೆ ವ್ಯಾಸಂಗ ಪ್ರಮಾಣ ಪತ್ರ. ಈ ಪ್ರಮಾಣ ಪತ್ರವನ್ನು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿ ಅಥವಾ ಉಪ ನಿರ್ದೇಶಕರು ಇವರಿಂದ ಧೃಢೀಕರಿಸಿರಬೇಕು.
4. ಸಿ.ಬಿ.ಎಸ್.ಸಿ/ಐ.ಸಿ.ಎಸ್.ಸಿ/ಕರ್ನಾಟಕೇತರ ರಾಜ್ಯದಲ್ಲಿ ಎಸ್.ಎಸ್.ಎಲ್.ಸಿ/ತತ್ಸಮಾನ ವ್ಯಾಸಂಗ ಮಾಡಿದ ಅಭ್ಯರ್ಥಿಗಳು ಅರ್ಹತಾ ಪ್ರಮಾಣ ಪತ್ರದ ನಿಗಧಿತ ರೂ.1000/- ಶುಲ್ಕವನ್ನು ಸೀಟು ಹಂಚಿಕೆಯಾದ ನಂತರ ಪ್ರವೇಶಾತಿ ಪಡೆಯುವ ಸಮಯದಲ್ಲಿ ಕೆ-2 ಮುಖಾಂತರ ತಾಂತ್ರಿಕ ಪರೀಕ್ಷಾ ಮಂಡಳಿಯ ಲೆಕ್ಕ ಶೀರ್ಷಿಕೆಗೆ ಪಾವತಿಸತಕ್ಕದ್ದು ಅಥವಾ ಸಮೀಪದ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ ಪಾವತಿಸಿ ರಶೀದಿ ಪಡೆಯತಕ್ಕದ್ದು. ಪ್ರವೇಶಾತಿ ಪ್ರಕ್ರಿಯೆಯ ಮುಗಿದ ನಂತರ ಸಂಸ್ಥೆಯವರು ಪ್ರವೇಶಾನುಮೋದನೆ ಸಮಯದಲ್ಲಿ ಅರ್ಹತಾ ಪ್ರಮಾಣ ಪತ್ರವನ್ನು ಕಾರ್ಯದರ್ಶಿಗಳು, ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು ಇವರಿಂದ ಪಡೆದು ಸಲ್ಲಿಸತಕ್ಕದ್ದು.
5. ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ, ಪ್ರವರ್ಗ-1 ಹಾಗೂ ಇತರೆ ಹಿಂದುಳಿದ ವರ್ಗಗಳ ಅಭ್ಯರ್ಥಿಗಳು ಕಡ್ಡಾಯವಾಗಿ ನಿಗಧಿತ ನಮೂನೆಯಲ್ಲಿನ ಜಾತಿ ಹಾಗೂ ಆದಾಯ ಪ್ರಮಾಣ ಪತ್ರ ಸಲ್ಲಿಸತಕ್ಕದ್ದು.

**5. ಮರು ಪ್ರವೇಶ (ರಿಪೀಟರ್):-**

ಪ್ರವೇಶ ನಿಯಮಗಳು 1987ರ ನಿಯಮ 2(ಹೆಚ್) ರಲ್ಲಿನ ನಿಯಮಗಳನ್ನು ಅನುಸರಿಸಿ, ನಿಯಮ 5ರ ಟಿಪ್ಪಣಿ 4ರ ಪ್ರಕಾರ ಪ್ರತಿ ಕೋರ್ಸಿನ ಪ್ರವೇಶ (ಇಂಟೇಕ್) ಸಂಖ್ಯೆಯ ಶೇಕಡ 10 ರಷ್ಟು ಸ್ಥಾನಗಳಿಗೆ ಮಾತ್ರ ಅರ್ಹ ಅಭ್ಯರ್ಥಿಗಳನ್ನು ರಿಪೀಟರ್ ಆಗಿ ಪ್ರವೇಶ ಮಾಡಿಕೊಳ್ಳಬಹುದಾಗಿರುತ್ತದೆ. ಈ ರಿಪೀಟರ್ ಪ್ರವೇಶಕ್ಕೆ ಆಯಾ ವರ್ಷದ ಸೆಮಿಸ್ಟರ್‌ಗೆ ಅನ್ವಯವಾಗುವಂತೆ ಎರಡು ಬಾರಿಗೆ ಮಾತ್ರ ಅವಕಾಶವಿರುತ್ತದೆ. ಈ ಅಭ್ಯರ್ಥಿಗಳ ಪ್ರವೇಶಾನುಮೋದನೆಗೆ ಸಂಬಂಧಿಸಿದಂತೆ ಕೆಳಕಂಡ ದಾಖಲೆಗಳನ್ನು ಅನುಮೋದನೆಗೆ ಸಲ್ಲಿಸತಕ್ಕದ್ದು.

- **ಅ.** ಡಿಪ್ಲೋಮಾ ಪ್ರವೇಶಕ್ಕೆ ಸಂಬಂಧಿಸಿದ ಎಲ್ಲಾ ಅಗತ್ಯ ಮೂಲ ದಾಖಲೆಗಳು.
- **ಆ.** ರಿಪೀಟರ್ ಆಗಿ ಪ್ರವೇಶ ಪಡೆದ ಅಭ್ಯರ್ಥಿಗಳ ಸಂಬಂಧದಲ್ಲಿ ಹಿಂದಿನ ಸಾಲಿನಲ್ಲಿ ಪ್ರವೇಶಾನುಮೋದನೆ ಪಡೆದಿರುವ ದಾಖಲೆ ಪ್ರತಿ.
- ಇ. ರಿಪೀಟರ್ ಅಭ್ಯರ್ಥಿಗಳ ಪ್ರವೇಶದ ಪಟ್ಟಿಯನ್ನು ಪ್ರತ್ಯೇಕವಾಗಿ ತಯಾರಿಸಿ ಅನುಮೋದನೆಗೆ ಸಲ್ಲಿಸುವುದು.

**6. ಕರ್ನಾಟಕದ ಅಭ್ಯರ್ಥಿಗಳಿಗೆ ಪ್ರವೇಶಾದ್ಯತೆ ಬಗ್ಗೆ:**

ಉಲ್ಲೇಖ(1)ರಲ್ಲಿ ನಮೂದಿಸಿರುವ ಸರ್ಕಾರಿ ಆದೇಶದಲ್ಲಿನ ಸೂಚನೆಗಳನ್ವಯ ಪ್ರತಿ ಕೋರ್ಸಿಗೆ ನಿಗಧಿಯಾದ ಸ್ಥಾನಗಳಿಗೆ ಶೇಕಡ 80 ರಷ್ಟು ಸ್ಥಾನಗಳನ್ನು ಕರ್ನಾಟಕದ ಅಭ್ಯರ್ಥಿಗಳಿಗೆ ಕಡ್ಡಾಯವಾಗಿ ಪ್ರವೇಶ ನೀಡತಕ್ಕದ್ದು. ಉಳಿದ ಶೇಕಡ 20 ರಷ್ಟು ಸ್ಥಾನಗಳನ್ನು ಮಾತ್ರ ಹೊರ ರಾಜ್ಯದ ಅಭ್ಯರ್ಥಿಗಳಿಗೆ ನೀಡಬಹುದಾಗಿದೆ.

**7 (ಅ). ಕರ್ನಾಟಕ ಅಭ್ಯರ್ಥಿಗಳು ಸಾಕಷ್ಟು ಸಂಖ್ಯೆಯಲ್ಲಿ ದೊರೆಯದೆ ಇರುವ ಬಗ್ಗೆ ಈ ಕುರಿತು ತೆಗೆದುಕೊಂಡಿರುವ ಕ್ರಮದಲ್ಲಿ ಸಂಬಂಧಿಸಿದ ದಾಖಲೆಗಳೊಂದಿಗೆ (ಉದಾ: ಪತ್ರಿಕಾ ಪ್ರಕಟಣೆ ಇತ್ಯಾದಿ) ಕಾಲೇಜು & ತಾಂತ್ರಿಕ ಶಿಕ್ಷಣ ಇಲಾಖೆಗೆ ಮುಂಚಿತವಾಗಿ ಲಿಖಿತ ರೂಪದಲ್ಲಿ ತಿಳಿಸಿ, ಮಾನ್ಯ ಆಯುಕ್ತರ ಪೂರ್ವಾನುಮತಿ ಪಡೆದು ಹೊರ ರಾಜ್ಯದ ಅಭ್ಯರ್ಥಿಗಳಿಗೆ ಪ್ರವೇಶ ನೀಡಬಹುದಾಗಿದೆ. ಆದಾಗ್ಯೂ, ಇದನ್ನೇ ಉದಾಹರಣೆಯಾಗಿ ತೆಗೆದುಕೊಂಡು ಹೊರರಾಜ್ಯದ ಅಭ್ಯರ್ಥಿಗಳಿಗೆ ಪ್ರವೇಶ ನೀಡಬಹುದೆಂದು ಹಕ್ಕು ಚಲಾಯಿಸುವಂತಿಲ್ಲ.**

ಪ್ರತಿ ಕೋರ್ಸಿನಲ್ಲಿ ಮಂಜೂರಾದ ಸ್ಥಾನಗಳಲ್ಲಿ ಶೇಕಡ 20ಕ್ಕಿಂತಲೂ ಹೆಚ್ಚು ಹೊರ ರಾಜ್ಯದ ಅಭ್ಯರ್ಥಿಗಳಿಗೆ ಪ್ರವೇಶ ನೀಡಿದ ಸಂಬಂಧದಲ್ಲಿ ಮೇಲಿನಂತೆ ಕ್ರಮ ಜರುಗಿಸದೆ ಅನುಮೋದನೆಗೆ ಪ್ರಸ್ತಾವನೆ ಸಲ್ಲಿಸಿದಲ್ಲಿ, ನಿಯಮಗಳ ಪ್ರಕಾರ ಪರಿಗಣಿಸಲಾಗುವುದಿಲ್ಲ. ಅಲ್ಲದೆ ಇದರಿಂದ ಉದ್ಭವಿಸಬಹುದಾದ ಪರಿಣಾಮಗಳಿಗೆ ಆಯಾ ಸಂಸ್ಥೆಯ ಪ್ರಿನ್ಸಿಪಾಲರು ಮತ್ತು ಆಡಳಿತ ಮಂಡಳಿಯವರು ಸಂಪೂರ್ಣ ಜವಾಬ್ದಾರರಾಗಿರುತ್ತಾರೆ.

**ಸೂಚನೆ:** ಶೇ.80ರಡಿಯಲ್ಲಿ ಕರ್ನಾಟಕದ ಅಭ್ಯರ್ಥಿಗಳ ಮತ್ತು ಶೇ.20ರಡಿಯಲ್ಲಿ ಕರ್ನಾಟಕೇತರ ಅಭ್ಯರ್ಥಿಗಳ ಪ್ರವೇಶಕ್ಕೆ ಸಂಬಂಧಿಸಿದಂತೆ ಪ್ರತ್ಯೇಕವಾದ ಪಟ್ಟಿಯನ್ನು ತಯಾರಿಸಿ ಸಂಬಂಧಿಸಿದ ದಾಖಲೆಗಳೊಂದಿಗೆ ನಿಗಧಿತ ಅವಧಿಯಲ್ಲಿ ಪ್ರವೇಶಾನುಮೋದನೆ ಪಡೆಯತಕ್ಕದ್ದು.

**8. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ ಹಾಗೂ ಇತರೇ ಮೀಸಲಾತಿ ಗುಂಪಿನ ಅಭ್ಯರ್ಥಿಗಳ ಪ್ರವೇಶದ ಬಗ್ಗೆ ಸೂಚನೆಗಳು :-**

1) ಸರ್ಕಾರದ ಆದೇಶ ಸಂಖ್ಯೆ: ಇಡಿ 114 ಟಿಪಿಇ 87 ದಿನಾಂಕ: 20/7/1987ರ ನಿಯಮ 5(2ಎ)ರಲ್ಲಿ ತಿಳಿಸಿರುವಂತೆ, ಕರ್ನಾಟಕ ಅಭ್ಯರ್ಥಿಗಳಿಗೆ ಮೀಸಲಾದ **ಶೇಕಡ 80** ಸ್ಥಾನಗಳಲ್ಲಿ ಕನಿಷ್ಟ **ಶೇ.20**ರಷ್ಟು ಪರಿಶಿಷ್ಟ ಜಾತಿ (ಎಸ್.ಸಿ) ಮತ್ತು **ಶೇ.5**ರಷ್ಟು ಪರಿಶಿಷ್ಟ ಪಂಗಡ (ಎಸ್.ಟಿ) ಅಭ್ಯರ್ಥಿಗಳಿಗೂ ಮೀಸಲಾಗಿರಿಸತಕ್ಕದ್ದು. ಈ ಮೀಸಲಾತಿಯ ಅಭ್ಯರ್ಥಿಗಳು ಸೂಕ್ತ ಸಂಖ್ಯೆಯಲ್ಲಿ ಬಾರದಿದ್ದಲ್ಲಿ, ಈ ಬಗ್ಗೆ ತೆಗೆದುಕೊಂಡಿರುವ ಕ್ರಮದಲ್ಲಿ ಸಂಬಂಧಿಸಿದ ದಾಖಲೆಗಳೊಂದಿಗೆ (ಉದಾ: ಪತ್ರಿಕಾ ಪ್ರಕಟಣೆ ಇತ್ಯಾದಿ)

I/603303/2024

ಕಾಲೇಜು & ತಾಂತ್ರಿಕ ಶಿಕ್ಷಣ ಇಲಾಖೆಗೆ ಮುಂಚಿತವಾಗಿ ಲಿಖಿತ ರೂಪದಲ್ಲಿ ತಿಳಿಸಿ, ಆಯುಕ್ತರ ಪೂರ್ವಾನುಮತಿ ಪಡೆದು ಸಾಮಾನ್ಯ ವರ್ಗದ ಕರ್ನಾಟಕದ ಅಭ್ಯರ್ಥಿಗಳಿಗೆ ಪ್ರವೇಶ ನೀಡಬಹುದಾಗಿದೆ. ಆದಾಗ್ಯೂ, ಇದನ್ನೇ ಉದಾಹರಣೆಯಾಗಿ ತೆಗೆದುಕೊಂಡು ಸಾಮಾನ್ಯ ವರ್ಗದ ಕರ್ನಾಟಕದ ಅಭ್ಯರ್ಥಿಗಳಿಗೆ ಪ್ರವೇಶ ನೀಡಬಹುದೆಂದು ಹಕ್ಕು ಚಲಾಯಿಸುವಂತಿಲ್ಲ. ಅಷ್ಟು ಪ್ರಮಾಣದ ಸ್ಥಾನಗಳನ್ನು ಖಾಲಿ ಬಿಟ್ಟು ಉಳಿದ ಸ್ಥಾನಗಳನ್ನು ತುಂಬುವುದು. ನಂತರ ಈ ವಿಷಯದಲ್ಲಿ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿ ಮುಂದಿನ ಕ್ರಮದ ಬಗ್ಗೆ ಅನುಮೋದನೆ ಪಡೆಯತಕ್ಕದ್ದು.

2) ಸರ್ಕಾರದ ಆದೇಶ ಸಂ. ಹಿಂವಕ 304 ಬಿಸಿಎ 2017, ದಿನಾಂಕ:14–09–2018ರಲ್ಲಿ ಮೀಸಲಾತಿ ಸೌಲಭ್ಯ ಪಡೆಯುವ ಸಂಬಂಧದ ವಾರ್ಷಿಕ ಆದಾಯ ಮಿತಿಯನ್ನು (Gross Annual Income) ರೂ.6.00 ಲಕ್ಷದಿಂದ ರೂ.8.00 ಲಕ್ಷಕ್ಕೆ ಹೆಚ್ಚಿಸಿದೆ. ಹಿಂದುಳಿದ ವರ್ಗಗಳ ಪ್ರವರ್ಗ 2ಎ, 2ಬಿ, 3ಎ, ಮತ್ತು 3ಬಿ ಪ್ರವರ್ಗದ ಅಭ್ಯರ್ಥಿ ಮತ್ತು ಅವರ ತಂದೆ–ತಾಯಿಯ/ಪೋಷಕರ ವಾರ್ಷಿಕ ಒಟ್ಟು ಆದಾಯ ಮಿತಿ ರೂ.8.00 ಲಕ್ಷ ಆಗಿದ್ದಲ್ಲಿ ಅಂತಹ ಅಭ್ಯರ್ಥಿಗಳು ಮೀಸಲಾತಿ ಸೌಲಭ್ಯ ಪಡೆಯಲು ಅರ್ಹರಿರುತ್ತಾರೆ.

3) ಪರಿಶಿಷ್ಟ ಜಾತಿ (ಎಸ್.ಸಿ), ಪರಿಶಿಷ್ಟ ಪಂಗಡ (ಎಸ್.ಟಿ) ಮತ್ತು ಪ್ರವರ್ಗ–1 ಹಾಗೂ ಗ್ರಾಮೀಣ ಗುಂಪಿನ ಸೌಲಭ್ಯಕ್ಕೆ ಕರ್ನಾಟಕ ಅಭ್ಯರ್ಥಿಗಳು ಮಾತ್ರ ಅರ್ಹರಾಗಿರುತ್ತಾರೆ.

## 9. ಅರ್ಹತಾ ಪತ್ರ:– (Eligibility Certificate)

ಕರ್ನಾಟಕದಲ್ಲಿ ಸಿಬಿಎಸ್‌ಇ, ಐಸಿಎಸ್‌ಇ ಪಠ್ಯಕ್ರಮದಲ್ಲಿ ವ್ಯಾಸಂಗ ಮಾಡಿ ಉತ್ತೀರ್ಣರಾದ ಅಭ್ಯರ್ಥಿಗಳು ಹಾಗೂ ಹೊರ ರಾಜ್ಯದಲ್ಲಿ ಎಸ್.ಎಲ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳು ಡಿಪ್ಲೋಮಾ ಪ್ರವೇಶಕ್ಕೆ ಅರ್ಹತೆ ಇರುವ ಸಂಬಂಧದಲ್ಲಿ **ಕಾರ್ಯದರ್ಶಿಯವರು, ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು–560 001** ಇವರು ನಿಗಧಿತ ಅವಧಿಯೊಳಗೆ ಅರ್ಹತಾ ಪತ್ರವನ್ನು ನೀಡಿರುವ ಬಗ್ಗೆ ಖಚಿತ ಪಡಿಸಿಕೊಂಡು ಪ್ರವೇಶ ನೀಡುವುದು. ಇಂತಹ ಅಭ್ಯರ್ಥಿಗಳ ಅರ್ಹತಾ ಪತ್ರವಿಲ್ಲದ ಪ್ರವೇಶವನ್ನು ನಿಯಮಗಳ ಪ್ರಕಾರ ಪರಿಗಣಿಸಲಾಗುವುದಿಲ್ಲ.

## 10. ವಿದೇಶ ಅಭ್ಯರ್ಥಿಗಳ ಪ್ರವೇಶ:–

ಯಾವುದೇ ವಿದೇಶಿ ಅಭ್ಯರ್ಥಿಗಳ ಪ್ರವೇಶ ಮಾಡಿಕೊಳ್ಳಲು ಅವಕಾಶವಿರುವುದಿಲ್ಲ. ಆದಾಗ್ಯೂ ಎಂಹೆಚ್‌ಆರ್‌ಡಿ, ನವದೆಹಲಿ ಇವರಿಂದ ನಿಯೋಜಿಸಲ್ಪಟ್ಟ ಅಭ್ಯರ್ಥಿಗಳಿಗೆ ಪ್ರವೇಶ ನೀಡಬಹುದಾಗಿದೆ. ಆದಾಗ್ಯೂ, ಇಂತಹ ಪ್ರವೇಶಗಳನ್ನು ಮಾಡುವ ಮುಂಚೆ ಸಂಬಂಧಿಸಿದ ದಾಖಲೆಗಳೊಂದಿಗೆ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿ ಅನುಮತಿ ಪಡೆದ ನಂತರವೇ ಪ್ರವೇಶ ನೀಡತಕ್ಕದ್ದು. ಪೂರ್ವಾನುಮತಿ ಇಲ್ಲದ ಪ್ರವೇಶಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ. ವಿದೇಶಿ ಅಭ್ಯರ್ಥಿಗಳ ಪ್ರವೇಶಕ್ಕೆ ಸಂಬಂಧಿಸಿದಂತೆ ಕೆಳಕಂಡ ದಾಖಲೆಗಳನ್ನು ಪ್ರವೇಶಾನುಮೋದನೆ ಸಮಯದಲ್ಲಿ ಸಲ್ಲಿಸಬೇಕಾಗಿರುತ್ತದೆ.

1) ಭಾರತ ಸರ್ಕಾರದ ಎಂ.ಹೆಚ್.ಆರ್.ಡಿ.ಯಿಂದ ನೀಡಿರುವ ಆಕ್ಷೇಪಣೆ ರಹಿತ ಅನುಮತಿ ಪತ್ರ.
2) ಕಾರ್ಯದರ್ಶಿಯವರು, ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು ಇವರಿಂದ **"ಸಮಾನತೆ ಪ್ರಮಾಣ ಪತ್ರ"** (Equivalency Certificate) ಅಥವಾ **ಅರ್ಹತಾ ಪ್ರಮಾಣ ಪತ್ರ** (Eligibility Certificate) ವನ್ನು ಪಡದಿರಬೇಕು.
3) ಇತರೇ ಅರ್ಹತಾ ದಾಖಲೆಗಳು

**11. ಹೈದ್ರಾಬಾದ್–ಕರ್ನಾಟಕ ಮೀಸಲಾತಿ:–**

ಕರ್ನಾಟಕ ರಾಜ್ಯ ಪತ್ರ ಸಂ. ಡಿಪಿಎಆರ್ 06 ಪಿಎಲ್ಎಕ್ಸ್ 2012 ಬೆಂಗಳೂರು, ದಿ:06–11–2013ರ ಪ್ರಕಾರ 2024–25ನೇ ಸಾಲಿಗೆ ಡಿಪ್ಲೋಮಾ ಪ್ರವೇಶ ಬಯಸುವ ಅಭ್ಯರ್ಥಿಗಳಿಗೆ ಹೈದ್ರಾಬಾದ್–ಕರ್ನಾಟಕ 371(ಜೆ) ಅಡಿಯ ವಿಶೇಷ ಮೀಸಲಾತಿಯ ಬಗ್ಗೆ ಅಭ್ಯರ್ಥಿಗಳ ಅರ್ಹತೆ ಮತ್ತು ಸಲ್ಲಿಸಬೇಕಾದ ದಾಖಲಾತಿಗಳ ಬಗ್ಗೆ ವಿವರವಾದ ಮಾಹಿತಿಯನ್ನು Annexure ರ ಪ್ರಕಾರ ಸಂಬಂಧಪಟ್ಟ ದಾಖಲೆಗಳನ್ನು ಸಲ್ಲಿಸತಕ್ಕದ್ದು. (Annexure ನ್ನು ಕಾಲೇಜು & ತಾಂತ್ರಿಕ ಶಿಕ್ಷಣ ಇಲಾಖೆ ವೆಬ್‌ಸೈಟ್ www.dtek.karnataka.gov.in ನಲ್ಲಿ ಪ್ರಕಟಿಸಲಾಗಿದೆ)

**12. ಸಂಖ್ಯಾಧಿಕ ಸೀಟುಗಳು (Supernumerary Seats) ಹಂಚಿಕೆ:**

ರಾಜ್ಯದ ಬಡ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿ ಕೋರ್ಸಿನಲ್ಲಿ ಒಟ್ಟು ಇಂಟೇಕ್‌ಗೆ ಹೆಚ್ಚುವರಿಯಾಗಿ ಶೇ.5ರಷ್ಟು ಸಂಖ್ಯಾಧಿಕ ಸೀಟುಗಳನ್ನು (Supernumerary Quota Seats) ಬೋಧನಾ ಶುಲ್ಕ ವಿನಾಯಿತಿ ಯೋಜನೆಯಡಿ ತಮ್ಮ ಸಂಸ್ಥೆಯಲ್ಲಿನ ಕೋರ್ಸುಗಳಿಗೆ ಸೀಟು ಆಯ್ಕೆ ಬಯಸುವ ಅಭ್ಯರ್ಥಿಗಳಿಂದ **ಸಂಸ್ಥೆಯ ಹಂತದಲ್ಲಿ ಪ್ರತ್ಯೇಕವಾಗಿ ದಿ:09–05–2024 ರಿಂದ ಅರ್ಜಿ ಆಹ್ವಾನಿಸಿ ಕೊನೆಯ ದಿ:25–05–2024ರವರೆಗೆ ಭರ್ತಿ ಮಾಡಿದ ಅರ್ಜಿಯನ್ನು ಪಡೆದು** ನಂತರ ಸರ್ಕಾರದ ಆದೇಶ ಸಂ. ಇಡಿ 155 ಟಿಇಸಿ 2011, ದಿ:08–07–2011 ಮತ್ತು ಸರ್ಕಾರದ ಆದೇಶ ಸಂ. ಇಡಿ 10 ಟಿಇಸಿ 2019, ದಿ:30–05–2019ರ ಅನ್ವಯ **ಆದಾಯ ಮಿತಿಯನ್ನು ಆದರಿಸಿ ಮೆರಿಟ್ ಪಟ್ಟಿಯನ್ನು ಸಂಸ್ಥೆಯ ಸೂಚನಾಫಲಕದಲ್ಲಿ ಪ್ರಕಟಿಸಿ ಅದರನ್ವಯ ಪ್ರಾಂಶುಪಾಲರ ಹಂತದಲ್ಲಿಯೇ ದಿನಾಂಕ:30–05–2024ರಂದು ಅರ್ಹ ಅಭ್ಯರ್ಥಿಗಳಿಗೆ ಈ ಕೆಳಗಿನ ವರ್ಗಗಳಂತೆ ಸೀಟು ಹಂಚಿಕೆ ಮಾಡುವುದು.** ಅಭ್ಯರ್ಥಿಗಳು ಈ ವರ್ಗದಡಿ ಪ್ರವೇಶ ಪಡೆದ ವಿದ್ಯಾರ್ಥಿಗಳ ಮಾಹಿತಿಯನ್ನು ಸಂಬಂಧಪಟ್ಟ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳು ತಮ್ಮ ಸಂಸ್ಥೆಯ ಅಂತರಜಾಲದಲ್ಲಿ (website) ಪ್ರಕಟಿಸತಕ್ಕದ್ದು.

| | |
|---|---|
| **ಮೊದಲನೇ ವರ್ಗ** | ಬೋಧನಾ ಶುಲ್ಕ ವಿನಾಯಿತಿ ಯೋಜನೆ (Supernumerary Quota) ಯಡಿ ಪ್ರತ್ಯೇಕವಾಗಿ ಅರ್ಹತಾ ಪಟ್ಟಿ ತಯಾರು ಮಾಡಿಕೊಂಡು ಮೊದಲಿಗೆ ವಾರ್ಷಿಕ ಆದಾಯ ರೂ.2.50 ಲಕ್ಷಕ್ಕೆ ಮೀರದ ಪೋಷಕರ ಅಭ್ಯರ್ಥಿಗಳಿಗೆ ಸೀಟು ಹಂಚಿಕೆ ಮಾಡುವುದು. |
| **2ನೇ ವರ್ಗ** | ಮೊದಲನೇ ವರ್ಗದಡಿಯಲ್ಲಿ ಸೀಟು ಹಂಚಿಕೆ ಮುಕ್ತಾಯವಾದ ನಂತರ ಉಳಿಯುವ ಸೀಟುಗಳನ್ನು ವಾರ್ಷಿಕ ಆದಾಯ ರೂ.2.50 ಲಕ್ಷದಿಂದ ರೂ.3.50 ಲಕ್ಷದವರೆಗಿನ ಪೋಷಕರ ಅಭ್ಯರ್ಥಿಗಳಿಗೆ ಸೀಟು ಹಂಚಿಕೆ ಮಾಡುವುದು. |
| **3ನೇ ವರ್ಗ** | 2ನೇ ವರ್ಗದಡಿಯಲ್ಲಿ ಸೀಟು ಹಂಚಿಕೆ ಮುಕ್ತಾಯವಾದ ನಂತರ ಉಳಿಯುವ ಸೀಟುಗಳನ್ನು ವಾರ್ಷಿಕ ಆದಾಯ ರೂ.3.50 ಲಕ್ಷದಿಂದ ರೂ.4.50 ಲಕ್ಷದವರೆಗಿನ ಪೋಷಕರ ಅಭ್ಯರ್ಥಿಗಳಿಗೆ ಸೀಟು ಹಂಚಿಕೆ ಮಾಡುವುದು. |
| **4ನೇ ವರ್ಗ** | 3ನೇ ವರ್ಗದಡಿಯಲ್ಲಿ ಸೀಟು ಹಂಚಿಕೆ ಮುಕ್ತಾಯವಾದ ನಂತರ ಉಳಿಯುವ ಸೀಟುಗಳನ್ನು ವಾರ್ಷಿಕ ಆದಾಯ ರೂ.4.50 ಲಕ್ಷದಿಂದ ರೂ.6.00 ಲಕ್ಷದವರೆಗಿನ ಪೋಷಕರ ಅಭ್ಯರ್ಥಿಗಳಿಗೆ ಸೀಟು ಹಂಚಿಕೆ ಮಾಡುವುದು. |
| **5ನೇ ವರ್ಗ** | 4ನೇ ವರ್ಗದಡಿಯಲ್ಲಿ ಸೀಟು ಹಂಚಿಕೆ ಮುಕ್ತಾಯವಾದ ನಂತರ ಉಳಿಯುವ ಸೀಟುಗಳನ್ನು ವಾರ್ಷಿಕ ಆದಾಯ ರೂ.6.00 ಲಕ್ಷದಿಂದ ರೂ.8.00 ಲಕ್ಷದವರೆಗಿನ ಪೋಷಕರ ಅಭ್ಯರ್ಥಿಗಳಿಗೆ ಸೀಟು ಹಂಚಿಕೆ ಮಾಡುವುದು. |

ಈ ಕೋರ್ಸಿನಡಿ ಸೀಟು ಪಡೆದ ಅಭ್ಯರ್ಥಿಗಳಿಂದ **ಬೋಧನಾ ಶುಲ್ಕದಲ್ಲಿ ವಿನಾಯಿತಿ ನೀಡಿ,** ಸರ್ಕಾರ ನಿಗಧಿಪಡಿಸಿರುವ **ಅಭಿವೃದ್ಧಿ ಶುಲ್ಕ ಮತ್ತು ಇತರೆ ಶುಲ್ಕವನ್ನು** ಪಾವತಿಸಿಕೊಳ್ಳತಕ್ಕದ್ದು. ಸದರಿ ಸಂಖ್ಯಾಧಿಕ ಸೀಟುಗಳನ್ನು **(SNQ)** ಸಂಸ್ಥೆಯವರು ಯಾವುದೇ ಕಾರಣಕ್ಕೂ ಆಡಳಿತ ಮಂಡಳಿ ಕೋಟಾದಡಿ ಪ್ರವೇಶ ನೀಡಬಾರದು. ನಿಗಧಿತ ದಿನಾಂಕದ ನಂತರ ಈ ಕೋಟಾದಡಿ ಖಾಲಿ ಉಳಿದ ಸೀಟುಗಳನ್ನು ಯಾವುದೇ ಕಾರಣಕ್ಕೂ ಪ್ರವೇಶಾತಿ ಮಾಡಬಾರದು (ಸೀಟ್ ಮ್ಯಾಟ್ರಿಕ್ಸ್ ಮತ್ತು ಇಂಟೇಕ್ ಮಾಹಿತಿಯನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸಿದೆ).

**ನಿಬಂಧನೆಗಳು:-**

1. ಎಲ್ಲಾ ಅನುದಾನಿತ (ಅನುದಾನ ರಹಿತ ಕೋರ್ಸು) / ಖಾಸಗಿ ಅನುದಾನರಹಿತ ಪಾಲಿಟೆಕ್ನಿಕ್‌ಗಳಲ್ಲಿ ಎಐಸಿಟಿಇಯಿಂದ ಮಾನ್ಯತೆ ಪಡೆದ ಎಲ್ಲಾ ತಾಂತ್ರಿಕ ಶಿಕ್ಷಣ ಸಂಸ್ಥೆಗಳಲ್ಲಿ ಎಐಸಿಟಿಇಯು ನಿಗಧಿಪಡಿಸಿರುವ ಪ್ರತಿ ಕೋರ್ಸುಗಳ ಒಟ್ಟು ಪ್ರವೇಶ ಮಿತಿಯ ಮೇಲೆ **ಶೇ.5ರಷ್ಟು ಸಂಖ್ಯಾಧಿಕ ಸೀಟುಗಳನ್ನು** (Supernumerary Seats) ಬೋಧನಾ ಶುಲ್ಕವಿಲ್ಲದೆ (without Tution fees) ಪ್ರತಿಭಾನ್ವಿತ ಬಡ ವಿದ್ಯಾರ್ಥಿಗಳ ಫಲಾನುಭವಿಗಳಿಗೆ ಸೀಟನ್ನು ಪ್ರಾಂಶುಪಾಲರ ಹಂತದಲ್ಲಿಯೇ ಮೇಲ್ಕಂಡಂತೆ ಹಂಚಿಕೆ ಮಾಡುವುದು.
2. **ಈ ವರ್ಗದಡಿ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳಿಗೆ ಡಿಪ್ಲೋಮಾ ವ್ಯಾಸಂಗ ಪೂರ್ಣಗೊಳ್ಳುವವರೆಗೂ ಯಾವುದೇ ಕಾರಣದಿಂದ ಪಾಲಿಟೆಕ್ನಿಕ್ / ಕೋರ್ಸುಗಳ ಬದಲಾವಣೆಗೆ ಅವಕಾಶ ಇರುವುದಿಲ್ಲ.**

**13. ಶುಲ್ಕ ನಿಗಧಿ ಬಗ್ಗೆ:-**

ಉಲ್ಲೇಖ(4)ರಲ್ಲಿನ ಸರ್ಕಾರಿ ಆದೇಶದನ್ವಯ ಈ ಕೆಳಕಂಡಂತೆ ಶುಲ್ಕ ನಿಗಧಿ ಆಗಿರುತ್ತದೆ. ಇದಲ್ಲದೆ ಯಾವುದೇ ರೀತಿಯ ಕ್ಯಾಪಿಟೇಷನ್ ಶುಲ್ಕ, ಹೆಚ್ಚಿನ ಠೇವಣಿ ಅಥವಾ ಶುಲ್ಕವನ್ನು ವಸೂಲಿ ಮಾಡಿದ ಬಗ್ಗೆ ದೂರು ಬಂದಲ್ಲಿ ಅಂತಹ ಪಾಲಿಟೆಕ್ನಿಕ್‌ನ ಮೇಲೆ ನಿಯಮಗಳ ಪ್ರಕಾರ ಸೂಕ್ತ ಕ್ರಮ ಜರುಗಿಸಿ, ಸರ್ಕಾರಕ್ಕೆ ವರದಿ ಮಾಡಲಾಗುವುದು.

| **ಖಾಸಗಿ ಪಾಲಿಟೆಕ್ನಿಕ್‌ಗೆ ಅನ್ವಯವಾಗುವಂತೆ** | **ಬೋಧನಾ ಶುಲ್ಕ** | **ಅಭಿವೃದ್ಧಿ ಶುಲ್ಕ** | **ಇತರೆ ಶುಲ್ಕ** | **ಒಟ್ಟು** |
|---|---|---|---|---|
| ಅ)ಕರ್ನಾಟಕದ ಅಭ್ಯರ್ಥಿಗಳಿಗೆ – | ರೂ. 12,075/- | ರೂ. 500/- | ರೂ. 830/- | **ರೂ. 13,405/-** |
| ಆ)ಕರ್ನಾಟಕೇತರ ಅಭ್ಯರ್ಥಿಗಳಿಗೆ – | ರೂ. 19,425/- | ರೂ. 500/- | ರೂ. 830/- | **ರೂ. 20,755/-** |

- **ಪ್ರತಿ ಸಂಸ್ಥೆಯು ಕನಿಷ್ಠ ಒಂದಾದರೂ (ಇಲಾಖೆಯಿಂದ ಎನ್.ಎಸ್.ಎಸ್ ಅನುದಾನ ಪಡೆಯುವ ಘಟಕವಾಗಲೀ/ಸ್ವ-ಆರ್ಥಿಕ ಘಟಕವಾಗಲೀ) ಘಟಕವನ್ನು ಖಡ್ಡಾಯವಾಗಿ ಹೊಂದಿರಬೇಕು.**
- **ಇಲಾಖೆಯಿಂದ ಎನ್.ಎಸ್.ಎಸ್ ಅನುದಾನ ಪಡೆಯುವ ಘಟಕವನ್ನು ಈಗಾಗಲೇ ಹೊಂದಿರುವ ಸಂಸ್ಥೆಗಳು ಸ್ವ-ಆರ್ಥಿಕ ಘಟಕವನ್ನು ಸಹ ಸ್ಥಾಪಿಸುವುದಿದ್ದರೇ ಮಾತ್ರ ಮೇಲ್ಕಂಡ ಶುಲ್ಕದ ಜೊತೆಗೆ ರೂ.40/-ನ್ನು ಎಲ್ಲಾ ವಿದ್ಯಾರ್ಥಿಗಳಿಂದ ಪ್ರವೇಶ ಸಮಯದಲ್ಲಿ ಪಾವತಿಸಿಕೊಳ್ಳತಕ್ಕದ್ದು.**
- **ಎನ್.ಎಸ್.ಎಸ್ ಘಟಕವನ್ನು ಈವರೆಗೂ ಹೊಂದಿಲ್ಲದ ಸಂಸ್ಥೆಗಳು ಸ್ವ-ಆರ್ಥಿಕ ಎನ್.ಎಸ್.ಎಸ್ ಘಟಕ ಸ್ಥಾಪಿಸಲು ಮೇಲ್ಕಂಡ ಶುಲ್ಕದ ಜೊತೆಗೆ ಈ ವರ್ಷಕ್ಕೆ ಮಾತ್ರ ರೂ.50/- ನ್ನು ಎಲ್ಲಾ ವಿದ್ಯಾರ್ಥಿಗಳಿಂದ ಪ್ರವೇಶ ಸಮಯದಲ್ಲಿ ಪಾವತಿಸಿಕೊಳ್ಳತಕ್ಕದು (ಮುಂದಿನ ವರ್ಷದಿಂದ ರೂ.40/-).**

**14. ಪ್ರವೇಶಕ್ಕೆ ನಿಗಧಿಪಡಿಸಿರುವ ಅಂತಿಮ ದಿನಾಂಕ:-**

ಕರ್ನಾಟಕ ಸರ್ಕಾರ ಹಾಗೂ ಎಐಸಿಟಿಇಯಿಂದ ಮಾನ್ಯತೆ ಪಡೆದ ರಾಜ್ಯದಲ್ಲಿನ ಎಲ್ಲಾ ಖಾಸಗಿ ಪಾಲಿಟೆಕ್ನಿಕ್‌ಗಳಲ್ಲಿ ಪ್ರಥಮ ಡಿಪ್ಲೋಮಾ ಕೋರ್ಸಿಗೆ **ದಿನಾಂಕ: 30-05-2024** ರವರೆಗೆ ಪ್ರವೇಶ ಮಾಡಿಕೊಳ್ಳುವ ಅವಕಾಶ ನೀಡಲಾಗಿದೆ. ಪ್ರಯುಕ್ತ, ಮೇಲ್ಕಂಡ ದಿನಾಂಕದೊಳಗೆ ಪ್ರವೇಶವನ್ನು ಮುಗಿಸುವ ವ್ಯವಸ್ಥೆ ಮಾಡಿಕೊಳ್ಳುವುದು.

2024–25ನೇ ಸಾಲಿಗೆ ಪ್ರಥಮ ಡಿಪ್ಲೋಮಾ ಪ್ರವೇಶಾತಿಯನ್ನು **ಮೆರಿಟ್ ಆಧಾರಿತ ಆನ್‌ಲೈನ್ ಪ್ರವೇಶಾತಿ ಪ್ರಕ್ರಿಯೆ ಮೂಲಕ ಸರ್ಕಾರಿ ಹಾಗೂ ಅನುದಾನಿತ ಪಾಲಿಟೆಕ್ನಿಕ್‌ಗಳ (ಅನುದಾನಿತ ಕೋರ್ಸುಗಳು) ಮೆರಿಟ್ ಆಧಾರಿತ ಕಾಲೇಜುವಾರು ಮತ್ತು ಕೋರ್ಸುಗಳಿಗೆ ಹಾಗೂ ಖಾಸಗಿ ಪಾಲಿಟೆಕ್ನಿಕ್‌ಗಳು ಸ್ವ–ಇಚ್ಛೆಯಿಂದ ಸರ್ಕಾರಕ್ಕೆ ಆಧ್ಯರ್ಪಣೆ ಮಾಡಿರುವ ಕೋರ್ಸುಗಳ ಸೀಟುಗಳಿಗೆ (ಎಸ್.ಎನ್.ಕ್ಯೂ ಸೀಟುಗಳು ಸೇರಿ)** ಮಾತ್ರ ಪ್ರವೇಶ ಬಯಸುವ ಅಭ್ಯರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಪರಿಗಣಿಸಿ, ಸೀಟುಗಳನ್ನು ಸ್ವ–ಇಚ್ಛೆಯಿಂದ ಸರ್ಕಾರಕ್ಕೆ ಬಿಟ್ಟು ಕೊಡುವ ನಿಟ್ಟಿನಲ್ಲಿ ಶಿಕ್ಷಣ ಸಂಸ್ಥೆ ಅಥವಾ ಸಂಘದವರು **ವ್ಯವಸ್ಥೆಗೆ Rs. 100/-ರ ಛಾಪ ಕಾಗದಲ್ಲಿ ಅಫಿಡವಿಟ್ (Affidavit) ಮೂಲಕ ಶಿಕ್ಷಣ ಸಂಸ್ಥೆ ಅಥವಾ ಸಂಘದವರು ತಮ್ಮ ಒಪ್ಪಿಗೆಯನ್ನು ನೀಡಲು ತಿಳಿಸಲಾಗಿರುತ್ತದೆ.**

ಪ್ರಯುಕ್ತ, ಈ ಸಂಬಂಧ ತಮ್ಮ ಸಂಸ್ಥೆಯಲ್ಲಿನ ಸೀಟುಗಳನ್ನು ಸ್ವ–ಇಚ್ಛೆಯಿಂದ ಸರ್ಕಾರಕ್ಕೆ ಬಿಟ್ಟು ಕೊಟ್ಟಂತಹ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳು ಅಂತಹ ಸೀಟುಗಳನ್ನು ಯಾವುದೇ ಕಾರಣಕ್ಕೆ ತಮ್ಮ ಹಂತದಲ್ಲಿ ಪ್ರವೇಶಾತಿಯನ್ನು ನೀಡತಕ್ಕದ್ದಲ್ಲ. ಹಾಗೂ ಸ್ವ–ಇಚ್ಛೆಯಿಂದ ಸರ್ಕಾರಕ್ಕೆ ಬಿಟ್ಟು ಕೊಟ್ಟಂತಹ ಸೀಟುಗಳನ್ನು ಹೊರತುಪಡಿಸಿ ಇನ್ನುಳಿದ ಸೀಟುಗಳಿಗೆ ಮಾತ್ರ ಪ್ರವೇಶ ನೀಡತಕ್ಕದ್ದು. ಈ ನಿಯಮಗಳನ್ನು ಉಲ್ಲಂಘಿಸಿ ಪ್ರವೇಶ ಮಾಡಿದಂತಹ ಸಂದರ್ಭಗಳಿಗೆ ಆಯಾ ಪಾಲಿಟೆಕ್ನಿಕ್‌ನ ಆಡಳಿತ ಮಂಡಳಿ ಹಾಗೂ ಪ್ರಿನ್ಸಿಪಾಲರೇ ಸಂಪೂರ್ಣ ಜವಾಬ್ದಾರರಾಗಿರುತ್ತಾರೆ.

ಉಲ್ಲೇಖ(1) ಮತ್ತು (2)ರಲ್ಲಿ ನಮೂದಿಸಿರುವ ಸರ್ಕಾರಿ ಆದೇಶದಲ್ಲಿ ತಿಳಿಸಿರುವ ಸೂಚನೆ/ ನಿಯಮಗಳನ್ನು ಮತ್ತು ಇಲಾಖೆಯ ಸುತ್ತೋಲೆಯಲ್ಲಿ ತಿಳಿಸಿರುವ ಸಾಮಾನ್ಯ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ಪ್ರವೇಶ ನೀಡತಕ್ಕದ್ದು. ನಿಯಮಗಳನ್ನು ಉಲ್ಲಂಘಿಸಿ ಪ್ರವೇಶ ಮಾಡಿದಂತಹ ಸಂದರ್ಭಗಳಿಗೆ ಆಯಾ ಪಾಲಿಟೆಕ್ನಿಕ್‌ನ ಆಡಳಿತ ಮಂಡಳಿ ಹಾಗೂ ಪ್ರಿನ್ಸಿಪಾಲರೇ ಸಂಪೂರ್ಣ ಜವಾಬ್ದಾರರಾಗಿರುತ್ತಾರೆ.

ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸುವ ದೃಷ್ಠಿಯಿಂದ ಸಕಾಲದಲ್ಲಿ ಪಾಠಪ್ರವಚನಗಳನ್ನು ಹಾಗೂ ಪ್ರಾಯೋಗಿಕ ತರಬೇತಿಯನ್ನು ಮುಗಿಸಬೇಕಾಗಿರುತ್ತದೆ. ಪ್ರಯುಕ್ತ, ನಿಗಧಿತ ಅವಧಿಯೊಳಗೆ ಪ್ರವೇಶವನ್ನು ಮುಗಿಸಿ ನಿಗಧಿಪಡಿಸಿರುವ ತಾತ್ಕಾಲಿಕ ಶೈಕ್ಷಣಿಕ ವೇಳಾಪಟ್ಟಿಯನ್ವಯ ಪಾಠಪ್ರವಚನಗಳನ್ನು ಮತ್ತು ಪ್ರಾಯೋಗಿಕ ತರಬೇತಿಯನ್ನು ಮುಗಿಸುವಲ್ಲಿ ವ್ಯವಸ್ಥಿತ ಕಾರ್ಯಕ್ರಮವನ್ನು ರೂಪಿಸಿಕೊಳ್ಳಬೇಕೆಂದು ತಿಳಿಸಲಾಗಿದೆ.

**ಕರ್ನಾಟಕದ ಆಡಳಿತ ಭಾಷೆ ಕನ್ನಡವಾಗಿರುವುದರಿಂದ, ಎಲ್ಲಾ ಪತ್ರ ವ್ಯವಹಾರಗಳನ್ನು ಕನ್ನಡದಲ್ಲೇ ಮಾಡುವುದು.**

ಪಾಲಿಟೆಕ್ನಿಕ್‌ನ ಶೈಕ್ಷಣಿಕ ಗುಣಮಟ್ಟ ಹಾಗೂ ಪ್ರವೇಶದಲ್ಲಿ ವಿದ್ಯಾರ್ಥಿಗಳ ಆಕರ್ಷಣೆ ಮತ್ತು ಪ್ರವೇಶ/ಪರೀಕ್ಷೆಯಲ್ಲಿ ಪಾರದರ್ಶಕತೆಯನ್ನು ತರುವ ದೃಷ್ಟಿಯಿಂದ ಮೇಲ್ಕಂಡ ಎಲ್ಲಾ ಸೂಚನೆಗಳನ್ನು ಕಡ್ಡಾಯವಾಗಿ ಅನುಸರಿಸಿ ಪಾಠ ಪ್ರವಚನಗಳನ್ನು ನಿಗಧಿಪಡಿಸುವ ಶೈಕ್ಷಣಕ ವೇಳಾಪಟ್ಟಿ ಅನುಸಾರ ನಿಗಧಿತ ಅವಧಿಯ ಒಳಗೆ ಮುಗಿಸುವಲ್ಲಿ ಸಕಾಲಿಕ ಕ್ರಮ ತೆಗೆದುಕೊಳ್ಳುವುದು ಆಯಾ ಸಂಸ್ಥೆಯ ಪ್ರಿನ್ಸಿಪಾಲರ ಜವಬ್ದಾರಿಯಾಗಿರುತ್ತದೆ ಶೈಕ್ಷಣಿಕ ವೇಳಾಪಟ್ಟಿಯನ್ನು ಮುಂದಿನ ದಿನಗಳಲ್ಲಿ ಪ್ರಕಟಿಸಲಾಗುವುದು.

***"ಟಿಪ್ಪಣಿ ಮಾನ್ಯ. ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ"***

Signed by
Prasanna H
Date: 08-05-2024 11:09:58

**ನಿರ್ದೇಶಕರು**
**ತಾಂತ್ರಿಕ ಶಿಕ್ಷಣ ಇಲಾಖೆ**
**ಬೆಂಗಳೂರು**

**ಇವರಿಗೆ,**

***ಎಲ್ಲಾ ಖಾಸಗಿ ಹಾಗೂ ಅನುದಾನಿತ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರಿಗೆ – ಮಾಹಿತಿಗಾಗಿ ಮತ್ತು ಸೂಕ್ತ ಅನುಸರಣೆಗಾಗಿ,***

**ಪ್ರತಿ ಮಾಹಿತಿಗಾಗಿ:–**

1. ಆಯುಕ್ತರವರ ಆಪ್ತಶಾಖೆಗೆ.
2. ನಿರ್ದೇಶಕರವರ ಆಪ್ತಶಾಖೆಗೆ.
3. ಜಂಟಿ ನಿರ್ದೇಶಕರು(ಆಡಳಿತ), ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
4. ಕಾರ್ಯದರ್ಶಿಯವರು, ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು **– ದಿ: 30–05–2024ರ** ಒಳಗೆ ಹೊರರಾಜ್ಯದ ಅಭ್ಯರ್ಥಿಗಳಿಗೆ ಅರ್ಹತಾ ಪ್ರಮಾಣ ಪತ್ರ ವಿತರಿಸುವ ಬಗ್ಗೆ ನಿಯಮಗಳ ಪ್ರಕಾರ ಕ್ರಮ ತೆಗೆದುಕೊಳ್ಳುವುದಲ್ಲದೆ ವಿದ್ಯಾರ್ಥಿಗಳ ಮಾಹಿತಿಗಾಗಿ ಪತ್ರಿಕಾ ಪ್ರಕಟಣೆಯನ್ನು ನೀಡುವಲ್ಲಿ ಕೂಡಲೇ ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಲಾಗಿದೆ.
5. ಇಲಾಖೆಯ ಎಲ್ಲಾ ಅಧಿಕಾರಿಗಳಿಗೆ,
6. ಸಾರ್ವಜನಿಕ ಸಂಪರ್ಕಾಧಿಕಾರಿಯವರಿಗೆ – ಮಾಹಿತಿಗಾಗಿ.
7. ಇ–ಗವರ್ನೆನ್ಸ್ ವಿಭಾಗಕ್ಕೆ – ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸುವುದು.
8. ಆರ್.ಡಿ.ಎಂ(1) ರಿಂದ (14)ರ ವರೆಗಿನ ವಿಭಾಗಗಳಿಗೆ.
9. ಎಸ್‌ಟಿಎಲ್, ಡಿವಿಪಿ(1) ಮತ್ತು ಡಿವಿಪಿ(2) ವಿಭಾಗಕ್ಕೆ.
10. ಕಡತಕ್ಕೆ.